ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಹತ್ತು ತಲೆಗಳ ರಾವಣನಿಗೆ ಪಕ್ಕಕ್ಕೆ ತಿರುಗಿ ಮಲಗಲು ಆಗುವುದಿಲ್ಲವಲ್ಲ...?*



ರಾವಣನ ತಲೆ ವೃದ್ಧರ ಹಲ್ಸೆಟ್ಟಿನಂತೆ – ಡಿಟಾಚೆಬಲ್!

ಡಿ.ಕೆ. ರಾಜ್, ಗದಗ
*ಹಳ್ಳಿ ಮೇಷ್ಟ್ರಿಗೂ, ಸಿಟಿ ಮೇಷ್ಟ್ರಿಗೂ ಏನು ವ್ಯತ್ಯಾಸ?*
ಹಳ್ಳಿ ಮೇಷ್ಟ್ರದ್ದು ಕನ್ನಡ ಮೀಡಿಯಮ್ಮು, ಸಿಟಿ ಮೇಷ್ಟ್ರದ್ದು ಎಲ್ಲಾ ಸಬ್ಜೆಕ್ಟುಗಳೂ ಮೀಡಿಯಮ್ಮೇ!

ಎಸ್. ತಾರಾನಾಥ, ಅಚ್ಚಪ್ಪನಕೊಪ್ಪಲು
*ಚಿಯರ್ ಗರ್ಲ್ಸ್ ಇಲ್ಲದ ಐಪಿಎಲ್ ಯಾವುದಕ್ಕೆ ಸಮಾನ?*
ಕಿಕ್ ನೀಡದ ಹೆಂಡಕ್ಕೆ!

ಮಾಗಡಿ ಶ್ರೀನಿವಾಸ್, ಬಾಳೆಕಟ್ಟೆ
*ಮಾಂಸ ಕಚ್ಚಿ ಸಿಗಿದು ತಿನ್ನುವ ಹೆಣ್ಣಿಗೆ ಸುಕೋಮಲೆ ಎಂಬ ನುಡಿ ಅನ್ವಯವಾಗಬಲ್ಲುದೆ?*
ಸುಕೋಮಲೇ ಎನ್ನಬಹುದು– ಸುಟ್ಟ ಕೋಳಿಗೆ ಮಸಾಲೆ ಲೇಪಿಸುವವಳು!

ಓಂಕುಮಾರ್ ಬಿ. ಸ್ವಾಮಿ, ಬೀದರ್
*ಸೂರ್ಯನಿಗೂ, ಚಂದ್ರನಿಗೂ ಇರುವ ಸಂಬಂಧವೇನು ತಿಳಿಸಿ?*



ಇಬ್ಬರೂ ಕಾಲ ಎಂಬ ಕಂಪೆನಿಯ ನೌಕರರೇ; ಒಬ್ಬನದು ಡೇ ಶಿಫ್ಟ್, ಇನ್ನೊಬ್ಬನದು ನೈಟ್ ಶಿಫ್ಟ್!

ಗೀತಾ ಬರ್ಲ. ಬೆಂಗಳೂರು
*ಮುಂದಿನ ಚುನಾವಣೆಯಲ್ಲಿ ನೀವೂ ಸ್ಪರ್ಧಿಸುತ್ತೀರಂತೆ, ಹೌದೇ?*
ನಿಜ. ನಾನು ಇದೇ ಮಾತನ್ನು ಹಿಂದಿನ ಮೂರು ಎಲೆಕ್ಷನ್‌ನಲ್ಲೂ ಹೇಳಿದ್ದೆ, ಮುಂದಿನ ಇಪ್ಪತ್ತರಲ್ಲೂ ಹೇಳುತ್ತೇನೆ!

ಎಂ.ಎಸ್.ಸೋಮಶೇಖರ್, ಮೈಸೂರು
*ಕಾಶಿಗೆ ಹೋದವರು ತಮಗೆ ಬಹಳ ಪ್ರಿಯವಾದುದನ್ನು ಬಿಡುವುದು ವಾಡಿಕೆ; ನೀವು ಹೋದಾಗ ಯಾವ ವಸ್ತುವನ್ನು ಬಿಡುವಿರಿ?*
ನನಗೆ ಬಹಳ ಪ್ರಶ್ನೆ ಕೇಳುವ ನೀವೇ ಬಹಳ ಪ್ರಿಯ; ಬನ್ನಿ ಕಾಶಿಗೆ ಹೋಗೋಣ!

ಎಸ್.ಜಿ.ರಾಜಶೇಖರರೆಡ್ಡಿ, ಗೌರಿಬಿದನೂರು
*ಬಂಗಾರದ ಬೆಲೆ ತುಟ್ಟಿಯಾಗಿ ಕಡೆಗೆ ಕಬ್ಬಿಣದ ಮಾಂಗಲ್ಯ ಕಟ್ಟಬೇಕಾಗುತ್ತೇನೋ...?*
ಆಗ ಮಂತ್ರವೂ ಬದಲಾಗುತ್ತದೆ. ಮಾಂಗಲ್ಯಂ ವೆಲ್ಡ್ ಕರ್ ದೇನಾ ಮಮ ಜೀವನ ಹೇತುನಾ...!

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ
*ನೋಡುವ ಕನಸಿಗೂ ಸರ್ಕಾರ ತೆರಿಗೆ ವಿಧಿಸಿದರೆ?*
ಕನಸಿನಲ್ಲೇ ಕಟ್ಟಲು ಅನುಮತಿ ನೀಡಿ ಎಂದು ಅರ್ಜಿ ಗುಜರಾಯಿಸಿ!

ವಿ. ಹಮೀದ್, ವಿಟ್ಲ
*ಸಿನಿಮಾ ಸುಳ್ಳುಗಳ ಕಂತೆ ಎಂದು ತಿಳಿದೂ ಜನರು ಅದನ್ನು ನೋಡಲು ಮುಗಿಬೀಳುವುದೇಕೆ?*
ವಿಗ್ಗಿನ ಈರೋ, ಪೆಗ್ಗಿನ ವಿಲನ್ನು, ಎಗ್ಗಿಲ್ಲದ ಈರೋಯಿನ್ನನ್ನು ನೋಡಲು!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಪತಿಯೇ ದೇವರು ಎಂಬ ಸಂಪ್ರದಾಯದಲ್ಲೂ ಅಕ್ಕಮಹಾದೇವಿ ಮತ್ತು ಮೀರಾ ತಮ್ಮ ಪತಿಯರಿದ್ದೂ ಪರಪುರುಷರನ್ನು ಧ್ಯಾನಿಸುತ್ತಾ ಅವರ ಹಿಂದೆ ಬೀಳಲು ಕಾರಣವೇನು?*
ಅವರು ಹಿಂಬಾಲಿಸಿದ್ದು ಪರಪುರುಷನನ್ನಲ್ಲ, ಪರಮಪುರುಷನನ್ನು!

ಗಾಯತ್ರಿ ಸೋಮೇಶ್ವರ್, ಮೈಸೂರು
*ಸಂಸ್ಕೃತಿಗೂ, ಸಂಸ್ಕಾರಕ್ಕೂ ಇರುವ ವ್ಯತ್ಯಾಸವೇನು?*
ಇದ್ದಷ್ಟು ದಿನವೂ ಇರಬೇಕಾದದ್ದು ಸಂಸ್ಕೃತಿ; ಇಲ್ಲವಾದಾಗ ಸಂಸ್ಕಾರ!

ಅಂಬಿಕಾ ಬಾಯರಿ, ಕುಂದಾಪುರ
*ನಂ.1 ವಾರಪತ್ರಿಕೆಯ, ನಂ.1 ಅಂಕಣದಲ್ಲಿ ನಂ.1 ಪ್ರಶ್ನೆ ಕೇಳಲು ಬೇಕಾದ ನಂ.1 ಅರ್ಹತೆ ಯಾವುದು ತಿಳಿಸುತ್ತೀರಾ?*
ಪ್ರಸ್ತುತತೆಗೆ ಒತ್ತು, ಮಸ್ತಕಕ್ಕೆ ಕಸರತ್ತು ನೀಡುವ ಯಾವ ಪ್ರಶ್ನೆಯಾದರೂ ಆದೀತು.

ಜಾಕೋಬ್ ಡಿಸೋಜ, ಕುರುವಳ್ಳಿ
*ಮುಖ ಮನಸ್ಸಿನ ಕನ್ನಡಿಯಾದರೆ ಹೃದಯ?*
ಭಾವನೆಗಳನ್ನು ಬಿಂಬಿಸುವ ಪಾದರಸ!

## ಬಹುಮಾನಿತ ಪ್ರಶ್ನೆ

ಕಾ. ಪ್ರಕಾಶ್, ಕನಕಪುರ
*ಉಸಿರುಗಟ್ಟುವ ವಾತಾವರಣ ರಾಜಕಾರಣಿಗಳಿಗೆ ಏಕೆ ಬರುತ್ತದೆ?*
ಪಕ್ಷ ನೀಡುವ ಆಮ್ಲಜನಕದಲ್ಲಿ ಕೊರತೆ ಉಂಟಾಗುವುದರಿಂದ!

ಸುಹಾಸ ರಾ.ಪಟವರ್ಧನ, ಗಳಪಗಾ
*ಬಡವನ ಸಿಟ್ಟು ದವಡೆಗೆ ಮೂಲ; ಶ್ರೀಮಂತನ ಸಿಟ್ಟು?*
ಬಿ.ಪಿ. ಡಯಾಬಿಟಿಸ್ ವೈದ್ಯರಿಗೆ ಅನುಕೂಲ!

ವಿ.ಮಾಧವ ಶಾಂತಮೂರ್ತಿ ಶಾನುಭಾಗ, ಕುಂದಾಪುರ
*ಸೀತೆ, ದ್ರೌಪದಿಯರ ನಾಡಿನಲ್ಲಿ ಅತ್ತೆಯೊಂದಿಗೆ ಬಾಳುವುದಕ್ಕಿಂತ ಕಾಡಿನಲ್ಲಿ ಪತಿಯೊಂದಿಗಿರುವುದು ಲೇಸೆಂದು ವನವಾಸ ಆಯ್ದುಕೊಂಡರೆ?*
ಊಹೂಂ; ಅವರು ತ್ರೇತ ಮತ್ತು ದ್ವಾಪರದಲ್ಲಿ ಫಾರೆಸ್ಟ್ ರೆಸಾರ್ಟ್ ಜನಪ್ರಿಯಗೊಳಿಸಿದ ಮಾಡೆಲ್‌ಗಳಂತೆ!

ಮುರಲೀಧರ ಕುಲಕರ್ಣಿ, ಬೀದರ್
*ನಮ್ಮ ಟಿವಿ ಆ್ಯಂಕರ್‌ಗಳಿಗೆ ಅತ್ಯಂತ ಕಡಿಮೆ ಉಡುಪು ಧರಿಸಬೇಕೆಂಬ ನಿರ್ಬಂಧವೇನಾದರೂ ಇದೆಯೇ?*



ಚೂಡಿದಾರ ಧರಿಸು ಎಂದರು; ಕೈಗೆ ಚೂಡಿ, ಮೈಗೆ ದಾರ ಧರಿಸಿದೆ ಎಂದಳೊಬ್ಬ ಮಿನಿವಸ್ತ್ರೆ!

ರಾಂಚಂದ್ರ ಕೊಪ್ಪಲು, ತೀರ್ಥಹಳ್ಳಿ
*ಹುಡುಗಿಯರ ಕಣ್ಣುಗಳನ್ನೇಕೆ ಆಯಸ್ಕಾಂತ ಅನ್ನೋದು?*
ಕಣ್ಣುಗಳ ಸೆಳೆತಕ್ಕೆ ಸಿಕ್ಕಿ, ಇವಳ ಪ್ರತಿ ಇಶಾರೆಗೂ 'Ah, yes!' ಎಂದು ಕಾಂತ ಹೇಳುವುದರಿಂದ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಸ್ವಿಸ್ ಬ್ಯಾಂಕ್ ಹಣ ವಾಪಸ್ ತರಲು ಕೇಂದ್ರಸರ್ಕಾರಕ್ಕೆ ಇಷ್ಟವೇ ಇಲ್ಲವೇ...?*
ಹಣದ ಸುದ್ದಿ ಎತ್ತಿದರೆ ಪಕ್ಷದಲ್ಲೇ ಹಣಾಹಣಿ ಆಗುವುದಂತೆ!

ಎಸ್.ಎನ್.ಪಾಟೀಲ, ಹುಬ್ಬಳ್ಳಿ
*ಪ್ರಾಣಿಗಳು ಏಕೆ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ?*
ಅಷ್ಟು ಬೇಸರ ಬರುವವರೆಗೆ ಮನುಷ್ಯ ಅದನ್ನು ಬಿಟ್ಟಿರುವುದಿಲ್ಲ!

■ ರಾಮ್